

ಹನುಮಪ್ಪನ ಮೂರ್ತಿಗೆ ಬಲವಾಗಿ ಹೊಡೆಯತೊಡಗಿದಳು. ಹೊಡದೇ ಹೊಡೆದಳು. ಕೈ ನೋಯತೊಡಗಿ, ದಣಿದು ಆ ಬೆಳಗಿನ ಥಂಡಿಯಲ್ಲೂ ಬೆವೆತಳು. ಬೆವರು ಮೈ ಪೂರ ಆವರಿಸಿತ್ತು. ಸೋತವಳಂತೆ ಅಲ್ಲೇ ನೆಲಕ್ಕೆ ಅಡ್ಡಾದಳು. ಇವಳು ಮಲಗಿದ್ದಷ್ಟೇ ತಡ. ರೆಪ್ಪೆಗಳು ಒಂದಕ್ಕೊಂದು ಹೆಣೆದುಕೊಂಡವು. ಸಣ್ಣಗೆ ಸೆರಗು ಬೀಸುತ್ತಿದ್ದ ತಂಗಾಳಿಗೆ ನಿದ್ದೆ ಹೋದಳು.

ಎರಡ್ಮೂರು ತಾಸು ಬಿಟ್ಟು ಎಚ್ಚರವಾದಾಗ ಮೈ ಭಾರವಾಗಿತ್ತು. ಕೈಗಳು ಅಲ್ಲಲ್ಲಿ ಉಬ್ಬಿಕೊಂಡು ಬಾವು ಬಂದಂತಿದ್ದವು. ನೋವಿನಲ್ಲೇ ಮುಲುಕುತ್ತ ಗುಡಿಯ ಅಂಗಳಕ್ಕೆ ಬಂದಳು. ಹೊಟ್ಟೆಯೊಳಗೆ ಹಸಿವು ಪತರಗುಟ್ಟತೊಡಗಿತ್ತು. ಗುಡಿಯ ಎದುರಿಗಿನ ಮನೆಯ ಮುಂದೆ ನಿಂತಳು. ಆ ಮನೆಯವರು ಹಾಳೆಯಲ್ಲಿ ಉಪ್ಪಿಟ್ಟು ಹಾಕಿ ಕೊಟ್ಟರು. ತಿಂದು ಬೊಗಸೆಗೆ ಸುರಿದ ನೀರು ಕುಡಿದು ಮತ್ತೆ ಗುಡಿಯತ್ತ ಹೆಜ್ಜೆ ಬೆಳೆಸಿದಳು.

ಮತ್ತೆ ನಿದ್ದೆ ಬಂದಂತೆನಿಸಿತು. ಮಲಗಿದಳು. ಗೊರಕೆ ತೆಗೆದಳು. ಇಡೀ ದಿನ ಮಲಗಿದಳು. ಎಚ್ಚರವಾದಾಗ ಏಳೋ, ಎಂಟೋ ಆಗಿತ್ತು. ಮತ್ತೆ ಹಸಿವು. ಬೀದಿಗಿಳಿದಳು. ಮತ್ಯಾರದೋ ಮನೆಯಲ್ಲಿ ನೀಡಿದ ಅನ್ನ ತಿಂದು ಗುಡಿಯ ಕಡೆ ವಾಪಸಾದಳು. ಗುಡಿಯಲ್ಲಿ ಬೆಳಗುತ್ತಿದ್ದ ಹಣತೆ ನೋಡಿದಳು. ಸ್ವಲ್ಪ ಹೊತ್ತು ನೋಡಿದ ನಂತರ ಕಣ್ಣು ಉರಿದಂತಾಗಿ ದೃಷ್ಟಿ